# ಕರ್ನಾಟಕ ವಿಧಾನ ಪರಿಷತ್ತು

ವಿಷಯ: ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ ಗಣಕಯಂತ್ರ/ಐಪ್ಯಾಡ್ ಖರೀದಿಸಲು ನೀಡಲಾಗಿರುತ್ತಿರುವ ಮುಂಗಡ ಹಣವನ್ನು ಹೆಚ್ಚಿಸುವ ಬಗ್ಗೆ.

******

**ಓದಲಾಗಿದೆ:-**

1. ಶ್ರೀ ರಮೇಶ್ ಬಾಬು, ಮಾನ್ಯ ಶಾಸಕರು, ಕರ್ನಾಟಕ ವಿಧಾನ ಪರಿಷತ್ತು, ಇವರ ಪತ್ರ ದಿ:11.11.2025.
2. ಆದೇಶ ಸಂಖ್ಯೆ:ಕವಿಪ:ಆ-1:25:ಐ-ಪ್ಯಾಡ್:2014 ದಿ:13.08.2014.
3. ಕಡತದ ಸಂಖ್ಯೆ:ಕವಿಪ:ಲೆಪಶಾ-1:ಇತರೆ:578:2025. ಕಂಡಿಕೆ ಸಂಖ್ಯೆ: 01 ರಿಂದ 20ರವರೆಗೆ.

**ಪ್ರಸ್ತಾವನೆ:-**

ಓದಲಾಗಿರುವ ಕ್ರಮ ಸಂಖ್ಯೆ:(1)ರಲ್ಲಿ ಕರ್ನಾಟಕ ವಿಧಾನ ಮಂಡಲದ ಶಾಸಕರುಗಳಿಗೆ ಕಾರು ಖರೀದಿ, ಮೋಟಾರು ಸೈಕಲ್ ಖರೀದಿಸಲು ರಿಯಾಯಿತಿ ಬಡ್ಡಿದರದಲ್ಲಿ ಸಾಲ ಸೌಲಭ್ಯ ಮತ್ತು ಸ್ವಂತ ಉಪಯೋಗಕ್ಕೆ ಗಣಕಯಂತ್ರ ಖರೀದಿಸಲು ರೂ.60,000/-ಗಳ ಅನುದಾನದ ಸೌಲಭ್ಯವಿರುತ್ತದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಮಧ್ಯಮ ವರ್ಗಗಳ ಕಾರುಗಳ ದರ ರೂ.1.00 ಕೋಟಿಯವರೆಗೂ ಹೆಚ್ಚುವರಿ ಆಗಿರುವುದರಿಂದ, ಜೀವನಶೈಲಿಗೆ ಅನುಸಾರವಾಗಿ ಶಾಸಕರಿಗೆ ಕಾರು ಖರೀದಿಯ ಗರಿಷ್ಠಮಿತಿಯ ಸೌಲಭ್ಯವನ್ನು ರೂ.30.00ಲಕ್ಷಗಳಿಂದ ರೂ.50.00 ಲಕ್ಷಗಳಿಗೆ, ಮೋಟಾರು ವಾಹನ ಖರೀದಿಯ ಸೌಲಭ್ಯವನ್ನು ರೂ.8,000/-ಗಳಿಂದ ರೂ.5.00 ಲಕ್ಷಗಳವರೆಗೆ ಹಾಗೂ ಗಣಕಯಂತ್ರದ ಅನುದಾನದ ಮೊತ್ತ ರೂ.60,000/-ಗಳಿಂದ ರೂ.1.00 ಲಕ್ಷಗಳಿಗೆ ಹೆಚ್ಚಿಸುವುದು ಅವಶ್ಯಕವಾಗಿದ್ದು, ತಮ್ಮ ಮನವಿಯನ್ನು ಪರಿಗಣಿಸಿ ಕರ್ನಾಟಕ ವಿಧಾನ ಮಂಡಲದ ಶಾಸಕರಿಗೆ ನೀಡುತ್ತಿರುವ ಸಾಲ ಸೌಲಭ್ಯದ ಮಿತಿಯನ್ನು ಹೆಚ್ಚಿಸುವಂತೆ ಮಾನ್ಯ ಸಭಾಪತಿಯವರಿಗೆ ಕೋರಿರುತ್ತಾರೆ.

ಓದಲಾಗಿರುವ ಕ್ರಮ ಸಂಖ್ಯೆ:(2)ರಲ್ಲಿ ಸರ್ಕಾರದ ಮಾನ್ಯ ಸಚಿವರುಗಳು, ವಿಧಾನ ಪರಿಷತ್ತಿನ ಮಾನ್ಯ ಪೀಠಾಸೀನಾಧಿಕಾರಿಗಳು ಮತ್ತು ಸಂಸದೀಯ ಪದಾಧಿಕಾರಿಗಳು ಹಾಗೂ ಮಾನ್ಯ ಸದಸ್ಯರುಗಳಿಗೆ ಗಣಕಯಂತ್ರ/ಐ-ಪ್ಯಾಡ್/ಟ್ಯಾಬ್ಲೆಟ್ ಖರೀದಿಸಲು ರೂ.60,000/-ಗಳನ್ನು ಮಂಜೂರು ಮಾಡಲಾಗಿರುತ್ತದೆ.

ಓದಲಾಗಿರುವ ಕ್ರಮ ಸಂಖ್ಯೆ:(3)ರಲ್ಲಿ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ ಗಣಕಯಂತ್ರ/ಐ-ಪ್ಯಾಡ್/ಟ್ಯಾಬ್ಲೆಟ್ ಖರೀದಿಸುವ ಸಲುವಾಗಿ ಪ್ರಸ್ತುತ ನೀಡಲಾಗುತ್ತಿರುವ ಗಣಕಯಂತ್ರ ಮುಂಗಡ ಹಣವನ್ನು ರೂ.60,000/-(ಅರವತ್ತು ಸಾವಿರ ರೂಪಾಯಿಗಳು ಮಾತ್ರ)ಗಳಿಂದ ರೂ.1.00 ಲಕ್ಷ (ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳಿಗೆ ಹೆಚ್ಚಿಸುವ ಪ್ರಸ್ತಾವನೆಗೆ ಮಾನ್ಯ ವಿಶೇಷ ಮಂಡಳಿಯು ಅನುಮೋದನೆ ನೀಡಿರುತ್ತದೆ.

..2.

**ಆದೇಶ ಸಂಖ್ಯೆ:ಕವಿಪ:ಆ-1:15:ಗಣಕಯಂತ್ರ:2026**
**ಬೆಂಗಳೂರು, ದಿನಾಂಕ:22.05.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ ಗಣಕಯಂತ್ರ/ಐ-ಪ್ಯಾಡ್/ಟ್ಯಾಬ್ಲೆಟ್ ಖರೀದಿಸುವ ಸಲುವಾಗಿ ಪ್ರಸ್ತುತ ನೀಡಲಾಗುತ್ತಿರುವ ಗಣಕಯಂತ್ರ ಮುಂಗಡ ಹಣವನ್ನು ರೂ.60,000/-(ಅರವತ್ತು ಸಾವಿರ ರೂಪಾಯಿಗಳು ಮಾತ್ರ)ಗಳಿಂದ ರೂ.1.00 ಲಕ್ಷ (ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳಿಗೆ ಹೆಚ್ಚಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಮೇಲೆ ತಿಳಿಸಿರುವ ಸೌಲಭ್ಯವನ್ನು ಪಡೆಯುವ ಮಾನ್ಯ ಶಾಸಕರುಗಳು ಧನಾದೇಶ ಪಡೆದು ಒಂದು ತಿಂಗಳೊಳಗಾಗಿ ಖರೀದಿಗೆ ಸಂಬಂಧಪಟ್ಟ ರಸೀದಿಯನ್ನು ಈ ಸಚಿವಾಲಯಕ್ಕೆ ನೀಡತಕ್ಕದ್ದು.

ಈ ಬಗ್ಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2011-02-102-0-08-051" ರ ಅಡಿಯಲ್ಲಿ ಭರಿಸತಕ್ಕದ್ದು.

ಮಾನ್ಯ ಸಭಾಪತಿಯವರ ಆದೇಶಾನುಸಾರ,

**(ಜ್ಯೋತಿ)**
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

**ಪ್ರತಿಗಳು:-**

01. ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
02. ಮಾನ್ಯ ಸಭಾಪತಿಯವರ, ಕಾರ್ಯದರ್ಶಿ/ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
03. ಮಾನ್ಯ ಉಪ ಸಭಾಪತಿಯವರ/ಸಂಸದೀಯ ಪದಾಧಿಕಾರಿಗಳ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
04. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
05. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ/ ಲೆಕ್ಕಪತ್ರ ಶಾಖೆ-2/ಕಾರ್ಯಕಾರಿ ಶಾಖೆ, ಕವಿಪ.
06. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
07. ಆಂತರಿಕ ಆರ್ಥಿಕ ಸಲಹೆಗಾರರು, ಕವಿಮಂ.
08. ಸೀನಿಯರ್ ಪ್ರೋಗ್ರಾಮರ್ ಗಣಕ ಕೇಂದ್ರ, ಕವಿಪ.
09. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿಗಳು.